ಉತ್ತರಾಖಂಡದ ಮಸೂರಿಯಲ್ಲಿ ವಾಸವಾಗಿರುವ ಸಪ್ನಾ ಕೋಟೇಶ್ವರ ಕಟ್ಟಿ ಅವರು ಧಾರವಾಡದವರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಕಥೆಗಳನ್ನು ಓದುವುದು ಬರೆಯುವುದು ಅವರಿಗಿಷ್ಟ. ಮರಾಠಿ ಸಾಹಿತ್ಯ ಕ್ಷೇತ್ರದ ಪರಿಚಯ ಇರುವವರು. ಮರಾಠಿ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಪಾರ್ಟಿಯಿದ್ದಾಗ ತಾನೂ ಟ್ರಿಮ್ಮಾಗಿ ರೆಡಿಯಾಗ್ತಾನೆ ಮಾತ್ರ. ಯಾಕಂದ್ರೆ ಇವರ ಕಿಟ್ಟಿಯ ಅಧ್ಯಕ್ಷೆ- ಅವನ ಬಾಸ್ ಗುಪ್ತಾನ ಹೆಂಡತಿ. ಮೇಡಂ ಬಂದೊಡನೆ ಸೆಟೆದೆದ್ದು ನಿಂತು 'ವಾಟ್ ಎ ಪ್ಲೆಶರ್ ಮಿಸೆಸ್ ಗುಪ್ತಾ!' ಎನ್ನುತ್ತಾ ಕೈ ಚಾಚಿ, ಇನ್ನೂ ತನ್ನ ಕೈ ಅವಳ ಮೆತ್ತನೆಯ ಅಂಗೈಯೊಳಗಿರುವಾಗಲೆ ಬಗ್ಗಿ ಒಳಕ್ಕೆ ಹಣಿಕಿಕ್ಕಿದಂತೆ ಮಾಡಿ 'ಮಧೂ ಬ್ರಿಂಗ್ ಸಮ್ ಫ್ರೈಡ್ ಆಲ್ಮಂಡ್ಸ್. ಲೆಟ್ ಮೀ ಓಪನ್ ನ್ಯೂ ವೈನ್ ಬಾಟಲ್ ಫಾರ್ ದ ಲವ್ಲೀ ಲೇಡೀಸ್' ಅನ್ನುತ್ತಾನೆ. ಆಗೆಲ್ಲ ಅವನ ಮುಖದಲ್ಲೂ ಗ್ಲಾಸಿನ ಹೊಳೆವ ಕೆಂಪು ದ್ರವದ್ದೇ ಲಕಲಕ.

ಈ ಬಾರಿ ತಮ್ಮಾಫೀಸಿನ ಅಮೆರಿಕೆಯ ಪ್ರಾಜೆಕ್ಟ್‌ಗೆ ತಾನು ಹೋಗಲೇಬೇಕು ಎಂಬ ಕೆಚ್ಚೆದ್ದಿದೆ ಅವಿನಾಶನಲ್ಲಿ, ಕಳೆದ ವರ್ಷವೂ ಆಸೆ ಇತ್ತು, ಇಲ್ಲವೆಂದಲ್ಲ. ಆದರೆ, ಅದೇ ಮಾರ್ಚಿನಲ್ಲಿ ಗುಪ್ತಾ ಅವರ ಹೆಂಡತಿಯ ತಮ್ಮ ಜತಿನ್ ಆಫೀಸ್ ಜಾಯಿನ್ ಆದಾಗಲೇ ತನ್ನ ಯುಎಸ್ ಭವಿಷ್ಯ ಅರಿವಾಗಿ ಹೋಗಿತ್ತವನಿಗೆ. ಅಲ್ಲದೆ ಜತಿನ್ ಅವರ ಕಂಪನಿ ತಯಾರಿಸುತ್ತಿದ್ದ ನ್ಯೂಮ್ಯಾಟಿಕ್ ಟೂಲ್‌ಗಳ ವಿಷಯದಲ್ಲೇ ತಜ್ಞ ಬೇರೆ, ಹೀಗಾಗಿ ಅವಿನಾಶ ಗಪ್ ಚುಪ್ಪಾಗಿದ್ದ.

'ಆ ನಿನ್ನ ಬಾಸ್ ತನ್ನ ಭಾವಮೈದನ ಯಶಸ್ಸಿಗೆಂದು ಕೊಟ್ಟ ಪಾರ್ಟಿಗೆ ಹೋಗಿ 'ಚಿಯರ್ಸ್ ಫಾರ್ ಯುವರ್ ಸಕ್ಸೆಸ್' ಅಂತ ಅವನ ಗ್ಲಾಸಿಗೆ ಗ್ಲಾಸು ಬಡೆದು ಬಂದೆಯಲ್ಲ!' ಅಂತ ಮಧು ಕಟುಕಿಯಾಡಿದ್ದರೂ ಜತಿನ್‌ನನ್ನು ಕಳಿಸಲು ಏರ್ ಪೋರ್ಟಿಗೂ ಹೋಗಲು ಒತ್ತಾಯ ಮಾಡಿ ಅವನಿಗೆ ಕೊಡಲು ದೊಡ್ಡ ಗೋಡಂಬಿ, ಪಿಸ್ತಾಚೋಗಳ ಪಾಕೆಟ್ ಕೈಯಲ್ಲಿ ತುರುಕಿದವಳು ಅವಳೇನೇ. 'ಏನೇ ಆಗಲಿ ಬಾಸ್‌ನ ಬಳಗ ತಾನೆ? ಸಂಬಂಧ ಚೆನ್ನಾಗಿಟ್ಟುಕೊಳ್ಳಬೇಕು' ಅಂತ ಇಬ್ಬರೂ ನಂಬಿದ್ದರು. ಬದುಕು ತಿಗ್ಗಾಮುಗ್ಗಾ ತಿರುಚಿಬಿಟ್ಟಿದೆ ಅವರಿಬ್ಬರನ್ನೂ, ಯಾರ ಯಾರನ್ನೋ ಮೆಚ್ಚಿಸಲು ಸುಮ್ಮಸುಮ್ಮನೆ ಪಾರ್ಟಿ ಕೊಡೋದು ಆಮೇಲೆ ಪಾರ್ಟಿಯಲ್ಲಿ ಕೈಯಲ್ಲಿ ಕೈ ಸೇರಿಸಿ 'ಐ ಆಮ್ ಪ್ರೌಡ್ ಆಫ್ ಯು ಹನಿ' ಅಂತ ಮಧುವೆಂದರೆ 'ಎವರಿತಿಂಗ್ ಬಿಕಾಸ್ ಆಫ್ ಯು' ಅಂತ ಎಲ್ಲರ ಮುಂದೇನೇ ಅವಿನಾಶ ಅವಳ ಗಲ್ಲಕ್ಕೆ ಮುತ್ತೊತ್ತುವುದನ್ನು ಒಂಥರಾ ರೂಢಿ ಮಾಡ್ಕೊಂಡು ಬಿಟ್ಟಿದ್ದಾರೆ. ಕುಡಿತ, ಊಟ ಆಮೇಲೆ ಡಾನ್ಸ್, ಮೆಲ್ಲಗೆ ತೋಳಿಗೆ ತೋಳು ತೀಡುತ್ತಾ ಶುರುವಾಗೋ ಡಾನ್ಸ್ ಎರಡು ಹಾಡು ಮುಗಿಯೋ ಹೊತ್ತಿಗೆಂದರೆ ಒಳ್ಳೆ ಸಿ ಗ್ರೇಡ್ ಸಿನಿಮಾ ಕುಣಿತವಾಗಿರ್ತದೆ. ಡಿಜೆ ಹಾಕೋ ಧಕ್ ಧಕ್ ಬಾಲಿವುಡ್ ಸಂಗೀತ ಇರುವಷ್ಟು ಹೊತ್ತು ಮಾತ್ರ ಬೆನ್ನಿನ ಗುಂಟ ಕುಂಡಲಿನಿ ಶಕ್ತಿಯ ಹರಿದಾಟ! ಆಮೇಲೆ ಸೋತು ಸೊಪ್ಪಾಗಿ ಕುಡಿದ ಮತ್ತಿನಲ್ಲಿ ಹಲ್ಕಾ ಮಾತಾಡುತ್ತಾ ಕಾರು ಎತ್ತೆತ್ತಲೋ ಚಲಾಯಿಸುತ್ತ ನಡುನಡುವೆ ನಿಲ್ಲಿಸಿ 'ವಾಯಕ್ ವಾಯಕ್' ಎಂದು ಕಾರುತ್ತಾ ಬರುವಾಗ ಹೊಟ್ಟೆಯಂತೆಯೇ ಇಬ್ಬರ ಮನಸ್ಸೂ ಖಾಲಿ.

ಅಂಥಾ ರಾತ್ರಿ ಅವನಿಗೆ ಹತ್ತು ವರ್ಷಗಳ ಕೆಳಗೆ ತಾನು 'ಕೆ ಆರ್ ಸಿ – ಬೆಳಗಾವಿ' ನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಕೋರ್ಸು ಮುಗಿಸಿದಾಗ ಯಾವಾಗ್ಲೂ ಬೀಳ್ತಿದ್ದ ಕನಸು ಬೀಳೋದು ಮಾತ್ರ ಗ್ಯಾರಂಟಿ. 'ತಾ ಸ್ಟೇಜ್ ಮೇಲೆ ಕಾನ್ವೋಕೇಶನ್ ಗೌನ್ ಧರಿಸಿ ನಿಂತಂತೆ; ತನ್ನ ಹೆಸರು 'ಅವಿನಾಶ ಶಶಿಕಾಂತ ಪಾಟೀಲ' ಅಂತ ಕೂಗಿದೊಡನೆ ಮುಂದಿನ ಸಾಲಲ್ಲೇ ಬೆನ್ನು ನೆಟ್ಟಗೆ ಮಾಡಿ ಕೂತ ಅಪ್ಪನೆದೆ ಉಬ್ಬಿದ್ದು ಅಷ್ಟು ದೂರಕ್ಕೆ ತನಗೂ ಕಂಡಂತೆ, ತಾ ಬಿಕ್ಕುತ್ತಾ ಕೆಳಗೋಡಿ ಬಂದು ಅವರ ಕಾಲಿಗೆರಗಿದಂತೆ'- ಆ ಕನಸಿನ ಬಗ್ಗೆ ಏನೋ ನಾಚಿಕೆ ಅವನಿಗೆ. ಅಂತೆಯೇ ಅದರ ಬಗ್ಗೆ ಅಪ್ಪನ ಹತ್ತಿರ ಎಂದೂ ಹೇಳಲೇ ಇಲ್ಲ ಅವ, ಹಾಗೆ ನೋಡಿದರೆ ಅವನೆಂದೂ ಕಾನ್ವೋಕೇಶನ್‌ಗೆ ಹೋಗಲೂ ಇಲ್ಲ, ಯಾವುದೋ ನೌಕರಿಯ ಇಂಟರವ್ಯೂಗೆ ಹೋದಾಗ